# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು

## ದಿನಾಂಕ:24.02.2023

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

ದೂರವಾಣಿ ಸಂಖ್ಯೆ: 08192–208029, ಫ್ಯಾಕ್ಸ್ ಸಂಖ್ಯೆ: 08192–208008


: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಅಮೃತಂ :

ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/298/2022–23/4817 ದಿನಾಂಕ:02.03.2023

ಗೆ,

**ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.**

ಮಾನ್ಯರೆ,

**ವಿಷಯ : ದಿನಾಂಕ:24.02.2023 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು.**

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ – III ರ ಪ್ರಕರಣ 16 (i) ರ ರೀತ್ಯ ದಿನಾಂಕ:24.02.2023 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–III ರ ಪ್ರಕರಣ 16(i)ರ ರೀತ್ಯ ನಡಾವಳಿ ತಲುಪಿದ ಏಳು ದಿನಗಳೊಳಗಾಗಿ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007.

**ಗೆ,**

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಶೈಕ್ಷಣಿಕ/ಮಾಸನಿ/ಅಭಿವೃದ್ಧಿ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ–577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ–577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ–577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ–577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:24.02.2023ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು (10ನೇ ವಾರ್ಷಿಕ ಘಟಿಕೋತ್ಸವ)

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

1. ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು. : ಅಧ್ಯಕ್ಷರು
2. ಕುಮಾರಿ ಗೀತಾ ಜಿ., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
3. ಪ್ರೊ. ರಾಮಲಿಂಗಪ್ಪ, ಡೀನರು, ವಿಜ್ಞಾನ ನಿಕಾಯ : ಸದಸ್ಯರು
4. ಪ್ರೊ. ಮಹಾಬಲೇಶ್ವರ್ ಯು.ಎಸ್., ಪ್ರಾಧ್ಯಾಪಕರು : ಸದಸ್ಯರು
5. ಡಾ. ರವಿ ಟಿ.ಎಸ್., ಪ್ರಾಚಾರ್ಯರು : ಸದಸ್ಯರು
6. ಡಾ. ನಾಗರಾಜ ಜಿ.ಯು., ಪ್ರಾಚಾರ್ಯರು : ಸದಸ್ಯರು
7. ಡಾ. ದಾಸಯ್ಯ ಜಿ., ಪ್ರಾಚಾರ್ಯರು : ಸದಸ್ಯರು
8. ಡಾ. ಪ್ರೇಮಾ ಪಿ.ಎಂ., ಪ್ರಾಚಾರ್ಯರು : ಸದಸ್ಯರು
9. ಪ್ರೊ. ಶಿವಶಂಕರ್ ಕೆ., ಕುಲಸಚಿವರು (ಪರೀಕ್ಷಾಂಗ). : ಸದಸ್ಯರು
10. ಪ್ರೊ. ಸರೋಜ ಬಿ.ಬಿ., ಕುಲಸಚಿವರು. : ಸದಸ್ಯ ಕಾರ್ಯದರ್ಶಿ

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 8ಕ್ಕಿಂತ ಹೆಚ್ಚು ಅಂದರೆ 10 ಜನ ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ನಂತರ, ನೂತನವಾಗಿ ಪ್ರಾಧ್ಯಾಪಕರ ವರ್ಗದಿಂದ ಸಿಂಡಿಕೇಟ್ ಸದಸ್ಯತ್ವಕ್ಕೆ ನಾಮನಿರ್ದೇಶನಗೊಂಡ ಪ್ರೊ. ಮಹಾಬಲೇಶ್ವರ್ ಯು.ಎಸ್ - ಇವರನ್ನು ಅಭಿನಂದಿಸಿ ಸ್ವಾಗತಿಸಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
| --- | --- |
| ವಿಷಯ ಸಂಖ್ಯೆ: | ವಿ.ಸಂ–01 (02/23) |

## –ಃ ಟಿಪ್ಪಣಿ ಃ–

**ವಿಷಯಃ** ದಿನಾಂಕ:25.01.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಅಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.

*****

ದಿನಾಂಕ:25.01.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಅಸಾಮಾನ್ಯ ಸಭಾ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:24.02.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ವಿಶೇಷ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:25.01.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಅಸಾಮಾನ್ಯ ಸಭಾ ನಡಾವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ನಂತರ ನಡಾವಳಿಗಳನ್ನು ಸಭೆಯು ದೃಢೀಕರಿಸಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ಸಂ-02<br>(02/23) |

# -: ಟಿಪ್ಪಣಿ :-

**ವಿಷಯ :** ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:28.02.2023 ರಂದು ಏರ್ಪಡಿಸಲಾಗಿರುವ 10ನೇ ವಾರ್ಷಿಕ ಘಟಿಕೋತ್ಸವದ ಸಮಾರಂಭದಲ್ಲಿ Ph.D/M.Phil/Gold Medal/ Rank Certificate ಹಾಗೂ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳನ್ನು ಪ್ರದಾನ ಮಾಡುವ ಪ್ರಸ್ತಾವನೆಗೆ ಅನುಮೋದಿಸುವ ಕುರಿತು.

*****

ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ಮೇರೆಗೆ ದಿನಾಂಕ:28.02.2023ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿವಿಧ ವಿಷಯಗಳಲ್ಲಿ - Ph.D/M.Phil/Gold Medal/ Rank Certificate ಹಾಗೂ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡುವ ಸಲುವಾಗಿ - ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000, ಸೆಕ್ಷನ್ 29(2)(S) ಹಾಗೂ ಘಟಿಕೋತ್ಸವ ಪರಿನಿಯಮಗಳನುಸಾರ ವಿವಿಧ ನಿಕಾಯವಾರು ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿ, ದಿನಾಂಕ:24.02.2023ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗೆ, ಪರಿಶೀಲನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## ನಿರ್ಣಯ

**10ನೇ ವಾರ್ಷಿಕ ಘಟಿಕೋತ್ಸವ**

**2021-22ನೇ ಸಾಲಿನಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳ ವಿವರಣಾ ಪಟ್ಟಿ**

| ಕ್ರ. ಸಂ. | ವಿವರ | ಗಂಡು | ಹೆಣ್ಣು | ಒಟ್ಟು ವಿದ್ಯಾರ್ಥಿಗಳು | ಒಟ್ಟು ಸ್ವರ್ಣ ಪದಕಗಳು |
|---|---|---|---|---|---|
| 01 | ಸ್ನಾತಕ ಪದವಿಯಲ್ಲಿ ಸ್ವರ್ಣ ಪದಕ ಪಡೆದ ವಿದ್ಯಾರ್ಥಿಗಳು | 04 | 10 | 14 | 22 |
| | ಸ್ನಾತಕೋತ್ತರ ಪದವಿಯಲ್ಲಿ ಸ್ವರ್ಣ ಪದಕ ಪಡೆದ ವಿದ್ಯಾರ್ಥಿಗಳು | 09 | 22 | 31 | 59 |
| | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ: | **13** | **32** | **45** | **81** |
| 02 | ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು | ಸ್ನಾತಕ ಪದವಿ | ಸ್ನಾತಕೋತ್ತರ ಪದವಿ | ಒಟ್ಟು ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು | |
| | | 13 | 27 | **40** | |
| 03 | ಎರಡರಿಂದ ಮೂರು ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು | ಸ್ನಾತಕ ಪದವಿ | ಸ್ನಾತಕೋತ್ತರ ಪದವಿ | ಒಟ್ಟು ಎರಡರಿಂದ ಮೂರು ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು | |
| | | 18 | 43 | **61** | |
| 04 | ಪಿಹೆಚ್.ಡಿ | ಗಂಡು | | ಹೆಣ್ಣು | ಒಟ್ಟು ವಿದ್ಯಾರ್ಥಿಗಳು |
| | | 10 | | 04 | **14** |
| | ಎಂ.ಫಿಲ್ | 01 | | - | **01** |
| 05 | ಸ್ನಾತಕ ಪದವಿ | 4,960 | | 7,219 | **12,179** |
| | ಸ್ನಾತಕೋತ್ತರ ಪದವಿ | 638 | | 1,161 | **1,799** |
| 06 | ಒಟ್ಟು ಸ್ನಾತಕ ಮತ್ತು ಸ್ನಾತಕೋತ್ತರ ಪದವಿ | ಸ್ನಾತಕ | | ಸ್ನಾತಕೋತ್ತರ | ಒಟ್ಟು |
| | | **12,179** | | **1,799** | **13,978** |
| 07 | ಒಟ್ಟು ವಿದ್ಯಾರ್ಥಿಗಳ ಶೇಕಡವಾರು ಫಲಿತಾಂಶ | ಸ್ನಾತಕ | | ಸ್ನಾತಕೋತ್ತರ | |
| | | **73.22%** | | **96.82%** | |

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:28.02.2023 ರಂದು ಏರ್ಪಡಿಸಲಾಗಿರುವ 10ನೇ ವಾರ್ಷಿಕ ಘಟಿಕೋತ್ಸವದ ಸಮಾರಂಭದಲ್ಲಿ Ph.D/M.Phil/Gold Medal/ Rank Certificate ಹಾಗೂ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳನ್ನು ಪ್ರದಾನ ಮಾಡುವ ಸಂಬಂಧ ಈ ಮೇಲ್ಕಂಡ ಪ್ರಸ್ತಾವನೆಗೆ ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ಸಂ–03 (02/23) |

## –:ಟಿಪ್ಪಣಿ:–

**ವಿಷಯ:** ವಿಶ್ವವಿದ್ಯಾನಿಲಯದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಕುರಿತು.

****

ವಿಶ್ವವಿದ್ಯಾನಿಲಯದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಸಂಬಂಧ ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತಗೊಂಡ 06 (CV) ಮನವಿಗಳನ್ನು ಘನತೆವೆತ್ತ ಮಾನ್ಯ ರಾಜ್ಯಪಾಲರಿಗೆ ಕಳುಹಿಸಲು ದಿನಾಂಕ:25.01.2023ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್/ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಗಳಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿತ್ತು.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಘನತೆವೆತ್ತ ಮಾನ್ಯ ರಾಜ್ಯಪಾಲರು ಈ ಕೆಳಕಂಡ ಗಣ್ಯರುಗಳಿಗೆ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿಗಳನ್ನು ಪ್ರದಾನ ಮಾಡಲು ಅನುಮೋದನೆ ನೀಡಿರುತ್ತಾರೆ.

**10ನೇ ವಾರ್ಷಿಕ ಘಟಿಕೋತ್ಸವದ ಗೌರವ ಡಾಕ್ಟರೇಟ್ ಪದವಿ ವಿವರ**

| ಕ್ರ.ಸಂ. | ಹೆಸರು | ಸಾಧನೆ ಕ್ಷೇತ್ರದ ಮಾಹಿತಿ | ವಿಳಾಸ |
|---|---|---|---|
| 1. | ಶ್ರೀ ಟಿ. ಎಂ ಚಂದ್ರಶೇಖರಯ್ಯ | ಶಿಕ್ಷಣ ಕ್ಷೇತ್ರ | ಕಾರ್ಯದರ್ಶಿಗಳು, ಟಿ.ಎಂ.ಎ.ಇ ಸಂಸ್ಥೆ, ಹರಪನಹಳ್ಳಿ. |
| 2. | ಶ್ರೀ ಅಥಣಿ ಎಸ್. ವೀರಣ್ಣ | ಕೈಗಾರಿಕೋದ್ಯಮಿಗಳು, ಶಿಕ್ಷಣ ತಜ್ಞರು, | ದಾವಣಗೆರೆ |
| 3. | ಶ್ರೀ ಎಂ. ಎಸ್. ಶಿವಣ್ಣ **(ಮರಣೋತ್ತರ)** | ಶಿಕ್ಷಣ ಕ್ಷೇತ್ರ | ಶ್ರೀ ಸಿದ್ದಗಂಗಾ ವಿದ್ಯಾಸಂಸ್ಥೆ, ಸ್ಥಾಪಕರು, ದಾವಣಗೆರೆ |

ಸದರಿ ವಿಷಯವನ್ನು ದಿನಾಂಕ:24.02.2023 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ವಿಶೇಷ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಘನತೆವೆತ್ತ ಮಾನ್ಯ ರಾಜ್ಯಪಾಲರಿಂದ ಅನುಮೋದನೆಗೊಂಡಂತೆ ಈ ಮೇಲ್ಕಂಡ ಗಣ್ಯರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ಸಂ–03 (02/23) |

## –:ಟಿಪ್ಪಣಿ:–

**ವಿಷಯ:** ಪರೀಕ್ಷಾಂಗ ವಿಭಾಗದಲ್ಲಿ ದಿನಾಂಕ:08.02.2023ರಂದು ಜರುಗಿದ ಉಪಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು

*****

ಪರೀಕ್ಷಾಂಗ ವಿಭಾಗದ ಬಿಲ್ಲುಗಳಿಗೆ ಸಂಬಂಧಪಟ್ಟಂತೆ, ಒಂದು ಲಕ್ಷಕ್ಕಿಂತ ಹೆಚ್ಚಿಗೆ ಇರುವ ವಿವಿಧ ಸಂಸ್ಥೆಯ ಬಿಲ್ಲುಗಳನ್ನು ಪರಿಶೀಲನೆ ಮಾಡುವ ಸಲುವಾಗಿ ಮಾನ್ಯ ಕುಲಪತಿಗಳಿಂದ ಅನುಮೋದನೆ ಪಡೆದು ಉಪ ಸಮಿತಿ ತಂಡವನ್ನು ರಚಿಸಲಾಗಿತ್ತು. ಈ ಸಂಬಂಧ ಇ–ಟೆಂಡರ್ ನಲ್ಲಿ ಯಶಸ್ವಿಯಾದ ಸಂಸ್ಥೆಯ ಬಿಲ್ಲುಗಳನ್ನು ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ದಿನಾಂಕ:08.02.2023ರಂದು ಕೂಲಂಕುಷವಾಗಿ ಪರಿಶೀಲನೆ ಮಾಡಿ ಸಂಬಂಧಪಟ್ಟ ಈ ಕೆಳಕಂಡ ಸಂಸ್ಥೆಗೆ ಹಣ ಪಾವತಿ ಮಾಡಬಹುದೆಂದು ಅನುಮೋದನೆ ನೀಡಿರುತ್ತಾರೆ.

**ಬಿಲ್ಲುಗಳ ವಿವರಗಳು ಈ ಕೆಳಕಂಡಂತಿದೆ.**

| ಕ್ರ.ಸಂ | ಸಭೆ ನಡೆದ ದಿನಾಂಕ | ಬಿಲ್ಲು ಸಲ್ಲಿಸಿದ ಸಂಸ್ಥೆಯ ಹೆಸರು | ವಿವರ | ಬಿಲ್ಲಿನ ಮೊತ್ತ |
|---|---|---|---|---|
| 01 | 08.02.2023 | M/S; Codeword process and printers, Mangaluru. | ಫೆಬ್ರವರಿ/ಮಾರ್ಚ್–2023ರ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಅಗತ್ಯವಾಗಿ ಬೇಕಾದಂತಹ ಥಿಯರಿ ಖಾಲಿ ಉತ್ತರ ಪತ್ರಿಕೆಗಳನ್ನು ಸರಬರಾಜು ಮಾಡಿದ ಬಾಬ್ತು. | ರೂ.21,83,000–00<br>ರೂ.21,83,000–00<br>ರೂ.21,83,000–00 |
| | **ಒಟ್ಟು ಮೊತ್ತ ( ರೂಪಾಯಿಗಳು ಅರವತ್ತೈದು ಲಕ್ಷದ ನಲವತ್ತೊಂಭತ್ತು ಸಾವಿರಗಳು ಮಾತ್ರ)** | | | **ರೂ.65,49,000–00** |

ಸದರಿ ಸಮಿತಿ ಸಭೆಯ ನಡಾವಳಿಯನ್ನು ದಿನಾಂಕ:24.02.2023 ರಂದು ನಡೆಯುವ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ**

ಪರೀಕ್ಷಾಂಗ ವಿಭಾಗದಲ್ಲಿ ಫೆಬ್ರವರಿ/ಮಾರ್ಚ್–2023ರ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಅಗತ್ಯವಾಗಿ ಬೇಕಾದಂತಹ ಥಿಯರಿ ಖಾಲಿ ಉತ್ತರ ಪತ್ರಿಕೆಗಳನ್ನು ಇ–ಟೆಂಡರ್ ನಲ್ಲಿ ಯಶಸ್ವಿಯಾದ ಸಂಸ್ಥೆಯವರಾದ M/S; Codeword process and printers, Mangaluru.- ಇವರುಗಳಿಂದ ಥಿಯರಿ ಖಾಲಿ ಉತ್ತರ ಪತ್ರಿಕೆಗಳನ್ನು ಸರಬರಾಜು ಮಾಡಿಕೊಳ್ಳಲಾಗಿದ್ದು, ಸದರಿ ಸಂಸ್ಥೆಯವರ ಬಿಲ್ಲುಗಳ ಮೊತ್ತವನ್ನು ಪಾವತಿಸುವ ಸಂಬಂಧ ದಿನಾಂಕ:08.02.2023ರಂದು ಜರುಗಿದ ಉಪ ಸಮಿತಿ ಸಭೆಯ ನಡಾವಳಿಯನ್ನು ಹಾಗೂ ಸದರಿ ಸಂಸ್ಥೆಯವರಿಗೆ **ರೂ.65,49,000–00ಗಳನ್ನು ಪಾವತಿಸಲು ಸಭೆಯು** ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ಸಂ–05 (02/23) |

## –:ಟಿಪ್ಪಣಿ:–

**ವಿಷಯ:** 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ವಿತರಿಸಲು ಚಿನ್ನದ ಪದಕ ಖರೀದಿಸಿದ ಬಾಬ್ತು ಪಾವತಿಗಾಗಿ ಸಿಂಡಿಕೇಟ್ ಅನುಮೋದನೆ ಬಗ್ಗೆ.

*****

ವಿಶ್ವವಿದ್ಯಾನಿಲಯದ 10ನೇ ಘಟಿಕೋತ್ಸವ ಸಮಾರಂಭದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ವಿತರಿಸಲು ಚಿನ್ನದ ಪದಕ ತಯಾರಿಸುವ ಸಂಸ್ಥೆಯವರಿಂದ ಚಿನ್ನ ಖರೀದಿಸುವ ದಿನದ ದರಕ್ಕನುಗುಣವಾಗಿ ಇ–ಟೆಂಡರ್ ಆಹ್ವಾನಿಸಲು ದಿನಾಂಕ:14.11.2022ರ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯನ್ನು ಪಡೆಯಲಾಗಿತ್ತು. ಆದರೆ, ಇ–ಟೆಂಡರ್ ಕರೆದಾಗ ಯಾವುದೇ ಅರ್ಜಿಗಳು ಸ್ವೀಕೃತವಾಗದ ಕಾರಣ ಪತ್ರಿಕಾ ಪ್ರಕಟಣೆ ನೀಡಿ ಸ್ಪರ್ದಾತ್ಮಕ ದರಪಟ್ಟಿಗಳನ್ನು ಪಡೆಯಲಾಗಿತ್ತು. ಅವುಗಳಲ್ಲಿ L1 ಇರುವ ಸಂಸ್ಥೆಯವರಾದ M/S. Mothi Silver & Gold, Davangere ಇವರಿಗೆ ಚಿನ್ನದ ಪದಕಗಳನ್ನು ಮಾರುಕಟ್ಟೆಯ ದರಕ್ಕನುಗುಣವಾಗಿ ಸರಬರಾಜು ಮಾಡಲು ಕಾರ್ಯಾದೇಶ ನೀಡಲಾಗಿತ್ತು.

ಅದರಂತೆ, M/S. Mothi Silver & Gold, Davangere – ಇವರಿಂದ **“ಚಿನ್ನದ ಪದಕ”** ಗಳನ್ನು ಖರೀದಿಸಲಾಗಿದೆ. ಸದರಿಯವರಿಂದ ಖರೀದಿಸಲಾದ ಬಿಲ್ಲಿನ ಮೊತ್ತ **ರೂ.2,66,558–00** (ರೂಪಾಯಿ ಎರಡು ಲಕ್ಷದ ಅರವತ್ತಾರು ಸಾವಿರದ ಐದುನೂರ ಐವತ್ತೆಂಟು ಮಾತ್ರ) ಗಳಾಗಿರುತ್ತದೆ. ಸದರಿ ಸಂಸ್ಥೆಯವರ ಬಿಲ್ಲುಗಳ ಮೊತ್ತ **ರೂ.2,66,558–00**ಗಳನ್ನು ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ಪರಿಶೀಲನೆ ಮಾಡಿ ಸಂಬಂಧಪಟ್ಟ ಸಂಸ್ಥೆಗೆ ಹಣ ಪಾವತಿ ಮಾಡಬಹುದೆಂದು ದಿನಾಂಕ:24.02.2023ರಂದು ಜರುಗಿದ ಉಪ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಿರುತ್ತಾರೆ. ಈ ಸಂಬಂಧ ಸದರಿ ಉಪ ಸಮಿತಿ ನಡಾವಳಿಯನ್ನು ದಿನಾಂಕ:24.02.2023ರ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

### ನಿರ್ಣಯ

10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ **“ಚಿನ್ನದ ಪದಕ”** ವಿತರಿಸಲು M/S. Mothi Silver & Gold, Davangere – ಇವರಿಂದ **“ಚಿನ್ನದ ಪದಕ”** ಗಳನ್ನು ಖರೀದಿಸಲಾಗಿದ್ದು, ಸದರಿ ಸಂಸ್ಥೆಯವರಿಗೆ ಬಿಲ್ಲುಗಳ ಮೊತ್ತವನ್ನು ಪಾವತಿಸುವ ಸಂಬಂಧ ದಿನಾಂಕ:24.02.2023ರಂದು ಜರುಗಿದ ಉಪ ಸಮಿತಿ ಸಭೆಯ ನಡಾವಳಿಯನ್ನು ಹಾಗೂ ಸದರಿ ಸಂಸ್ಥೆಯವರಿಗೆ **ರೂ.2,66,558–00ಗಳನ್ನು ಪಾವತಿಸಲು ಸಭೆಯು** ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ಸಂ–06 (02/23) |

## –:ಟಿಪ್ಪಣಿ:–

**ವಿಷಯ:** 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಹೊಸದಾಗಿ ಬೆಳ್ಳಿಗದೆ ಖರೀದಿಸಿದ ಬಾಬ್ತು ಪಾವತಿಗಾಗಿ ಸಿಂಡಿಕೇಟ್ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿರುವ ಕುರಿತು.

*****

ವಿಶ್ವವಿದ್ಯಾನಿಲಯದ ಗೌರವ ಸೂಚಕ ಬಿರುದು – **'ಬೆಳ್ಳಿ ಗದೆ'** ಯನ್ನು (ವಿಶ್ವವಿದ್ಯಾನಿಲಯದ ಲಾಂಛನವುಳ್ಳ ಬೆಳ್ಳಿ ಗದೆ) ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭಕ್ಕೆ ಅವಶ್ಯಕವಾಗಿ ರುವುದರಿಂದ ಅಂದಾಜು 2.5 ಕೆ.ಜಿ. ತೂಕದ ಬೆಳ್ಳಿ ಗದೆಯನ್ನು ಬೆಳ್ಳಿ ಖರೀದಿಸುವ ದಿನದ ದರಕ್ಕನುಗುಣವಾಗಿ ಖರೀದಿಸಿ ಬೆಳ್ಳಿ ಗದೆ ಮಾಡಿಸಲು ದಿನಾಂಕ:14.11.2022ರ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆಯಲಾಗಿತ್ತು. ಆದರೆ, ಇ–ಟೆಂಡರ್ ಕರೆದಾಗ ಯಾವುದೇ ಅರ್ಜಿಗಳು ಸ್ವೀಕೃತವಾಗದ ಕಾರಣ ಪತ್ರಿಕಾ ಪ್ರಕಟಣೆ ನೀಡಿ ಸ್ಪರ್ಧಾತ್ಮಕ ದರಪಟ್ಟಿಗಳನ್ನು ಪಡೆಯಲಾಗಿತ್ತು. ಅವುಗಳಲ್ಲಿ L1 ಇರುವ ಸಂಸ್ಥೆಯವರಾದ M/S. Mothi Gold & Diamond, Davangere ಇವರಿಗೆ ಹೊಸದಾಗಿ ಬೆಳ್ಳಿ ಗದೆಯನ್ನು ಮಾರುಕಟ್ಟೆಯ ದರಕ್ಕನುಗುಣವಾಗಿ ಸರಬರಾಜು ಮಾಡಲು ಕಾರ್ಯಾದೇಶ ನೀಡಲಾಗಿತ್ತು.

ಈ ಹಿನ್ನೆಲೆಯಲ್ಲಿ ದಿನಾಂಕ:28.02.2023ರಂದು ಜರುಗಲಿರುವ ವಿಶ್ವವಿದ್ಯಾನಿಲಯದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಕಾರ್ಯಕ್ರಮಕ್ಕೆ ಹೊಸದಾಗಿ ಬೆಳ್ಳಿ ಗದೆಯನ್ನು M/S. Mothi Gold & Diamond, Davangere ಇವರಿಂದ ಖರೀದಿಸಲಾಗಿದೆ. ಸದರಿ ಬಿಲ್ಲಿನ ಮೊತ್ತ **ರೂ.2,34,584–00** (ರೂಪಾಯಿ ಎರಡು ಲಕ್ಷದ ಮೂವತ್ತು ನಾಲ್ಕು ಸಾವಿರದ ಐದುನೂರ ಎಂಬತ್ನಾಲ್ಕು ಮಾತ್ರ) ಗಳಾಗಿರುತ್ತದೆ. ಸದರಿ ಸಂಸ್ಥೆಯವರ ಬಿಲ್ಲುಗಳ ಮೊತ್ತ **ರೂ.2,34,584–00** ಗಳನ್ನು ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ಪರಿಶೀಲನೆ ಮಾಡಿ ಸಂಬಂಧಪಟ್ಟ ಸಂಸ್ಥೆಗೆ ಹಣ ಪಾವತಿ ಮಾಡಬಹುದೆಂದು ದಿನಾಂಕ:24.02.2023ರಂದು ಜರುಗಿದ ಉಪ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಿರುತ್ತಾರೆ. ಈ ಸಂಬಂಧ ಸದರಿ ಉಪ ಸಮಿತಿ ನಡಾವಳಿಯನ್ನು ದಿನಾಂಕ:24.02.2023ರ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

### ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದ ವಾರ್ಷಿಕ ಘಟಿಕೋತ್ಸವ ಸಮಾರಂಭಗಳಿಗೆ M/S. Mothi Gold & Diamond, Davangere – ಇವರಿಂದ ಹೊಸದಾಗಿ **"ಬೆಳ್ಳಿಗದೆ"** ಯನ್ನು ಖರೀದಿಸಲಾಗಿದ್ದು, ಸದರಿ ಸಂಸ್ಥೆಯವರಿಂದ ಖರೀದಿಸಲಾದ ಬಿಲ್ಲುಗಳ ಮೊತ್ತವನ್ನು ಪಾವತಿಸುವ ಸಂಬಂಧ ದಿನಾಂಕ:24.02.2023 ರಂದು ಜರುಗಿದ ಉಪ ಸಮಿತಿ ಸಭೆಯ ನಡಾವಳಿಯನ್ನು ಹಾಗೂ ಸದರಿ ಸಂಸ್ಥೆಯವರಿಗೆ **ರೂ.2,34,584–00**ಗಳನ್ನು ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ಸಂ-07 (02/23) |

# -:ಟಿಪ್ಪಣಿ:-

ವಿಷಯಃ ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಕ್ಕೆ ಅರೆಕಾಲಿಕ ಮಹಿಳಾ ವೈದ್ಯಾಧಿಕಾರಿಯನ್ನು ನೇಮಕ ಮಾಡಿರುವುದನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿರುವ ಕುರಿತು.

ಉಲ್ಲೇಖಃ
1. ವಿಶ್ವವಿದ್ಯಾನಿಲಯದಲ್ಲಿ ದಿನಾಂಕಃ25.01.2023ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.
2. ವಿಶ್ವವಿದ್ಯಾನಿಲಯದಲ್ಲಿ ದಿನಾಂಕಃ20.02.2023ರ ಅರೆಕಾಲಿಕ ಮಹಿಳಾ ವೈದ್ಯಾಧಿಕಾರಿಗಳ ನೇಮಕಾತಿ ಸಮಿತಿ ಸಭೆಯ ನಡಾವಳಿ.
3. ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಸಂಖ್ಯೆಃದಾವಿ/ಮಾಸನಿ/270/ 2022-23/4701, ದಿನಾಂಕಃ 20.02.2023
4. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕಃ 22.02.2023

********

ದಿನಾಂಕಃ25.01.2023ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಕ್ಕೆ ಅರೆಕಾಲಿಕ ಮಹಿಳಾ ವೈದ್ಯಾಧಿಕಾರಿಯನ್ನು ನೇಮಕ ಮಾಡುವ ಸಂಬಂಧ ಅರ್ಹ ಅಭ್ಯರ್ಥಿಗಳ ಸಂದರ್ಶವನ್ನು ದಿನಾಂಕಃ 17.02.2023ರಂದು ಏರ್ಪಡಿಸಲಾಗಿತ್ತು. ಸದರಿ ಹುದ್ದೆಗೆ ಒಟ್ಟು 05 ಅರ್ಜಿಗಳು ಬಂದಿದ್ದು, ಸಂದರ್ಶನಕ್ಕೆ ಡಾ. ಚೇತನ ಎಂ. ಹೆಚ್. ಮತ್ತು ಡಾ. ಸೌಜನ್ಯ ಮಡಿವಾಳವರ ಕೆ - ಇಬ್ಬರು ಅಭ್ಯರ್ಥಿಗಳು ಮಾತ್ರ ಹಾಜರಾಗಿರುತ್ತಾರೆ. ಸದರಿ ಸಂದರ್ಶನಕ್ಕೆ ಆಗಮಿಸಿದ ಇಬ್ಬರು ಅಭ್ಯರ್ಥಿಗಳಲ್ಲಿ ಡಾ. ಚೇತನ ಎಂ.ಹೆಚ್. ಇವರನ್ನು ನೇಮಕ ಮಾಡಿಕೊಳ್ಳಲು ದಿನಾಂಕಃ20.02.2023ರ ಅರೆಕಾಲಿಕ ಮಹಿಳಾ ವೈದ್ಯಾಧಿಕಾರಿಗಳ ನೇಮಕಾತಿ ಸಮಿತಿ ಸಭೆಯ ನಡಾವಳಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಸದರಿ ನಡಾವಳಿಯ ಶಿಫಾರಸ್ಸಿನ ಮೇರೆಗೆ ಉಲ್ಲೇಖ (3)ರಲ್ಲಿ ಡಾ. ಚೇತನ ಎಂ.ಹೆಚ್. ಇವರನ್ನು 11 ತಿಂಗಳ ಅವಧಿಗೆ ಗೌರವ ಸಂಭಾವನೆ ರೂ.30,000/-ಗಳೊಂದಿಗೆ ಎರಡನೇ ಶನಿವಾರ ಮತ್ತು ನಾಲ್ಕನೇ ಶನಿವಾರ ಸೇರಿದಂತೆ ಕಛೇರಿ ಸಮಯ ಬೆಳಿಗ್ಗೆ 10.00 ರಿಂದ ಸಂಜೆ 5.30ರವರೆಗೆ ಕರ್ತವ್ಯ ನಿರ್ವಹಿಸುವ ಷರತ್ತಿಗೊಳಪಟ್ಟು ನೇಮಕ ಮಾಡಿಕೊಳ್ಳಲಾಗಿದೆ. ಸದರಿ ವಿಷಯವನ್ನು ದಿನಾಂಕಃ24.02.2023 ರಂದು ನಡೆಯುವ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಕ್ಕೆ ಅರೆಕಾಲಿಕ ಮಹಿಳಾ ವೈದ್ಯಾಧಿಕಾರಿಯನ್ನಾಗಿ ಡಾ. ಚೇತನ ಎಂ.ಹೆಚ್. ಇವರನ್ನು 11 ತಿಂಗಳ ಅವಧಿಗೆ ಗೌರವ ಸಂಭಾವನೆ ರೂ.30,000/-ಗಳೊಂದಿಗೆ ಎರಡನೇ ಶನಿವಾರ ಮತ್ತು ನಾಲ್ಕನೇ ಶನಿವಾರ ಸೇರಿದಂತೆ ಕಛೇರಿ ಸಮಯ ಬೆಳಿಗ್ಗೆ 10.00 ರಿಂದ ಸಂಜೆ 5.30ರವರೆಗೆ ಕರ್ತವ್ಯ ನಿರ್ವಹಿಸುವ ಷರತ್ತಿಗೊಳಪಟ್ಟು ನೇಮಕ ಮಾಡಿಕೊಂಡಿರುವುದನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ವಿಭಾಗ | |
| --- | --- |
| ವಿಷಯ ಸಂಖ್ಯೆ: | ವಿ.ಸಂ–08 (02/23) |

## –:ಟಿಪ್ಪಣಿ:–

**ವಿಷಯ:** **ಚಿತ್ರದುರ್ಗ ತಾಲ್ಲೂಕು ಜಿ.ಆರ್. ಹಳ್ಳಿ ಗ್ರಾಮದ ಬಳಿ ಇರುವ ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ಕೇಂದ್ರ ಜ್ಞಾನಗಂಗೋತ್ರಿ ಆವರಣವನ್ನು ತಾತ್ಕಾಲಿಕವಾಗಿ ವೈದ್ಯಕೀಯ ಕಾಲೇಜಿಗೆ ವರ್ಗಾಯಿಸುವ ಕುರಿತು.**

**ಉಲ್ಲೇಖ:** 1. ಸರ್ಕಾರದ ಪತ್ರ ಸಂಖ್ಯೆ: ಇಡಿ 12 ಯುಎನ್ಇ 2023, ದಿನಾಂಕ:01.02.2023
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:23.02.2023

*****

ಮಾನ್ಯ ಶ್ರೀ ಎ ನಾರಾಯಣಸ್ವಾಮಿ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಖಾತೆ ಸಚಿವರು, ಭಾರತ ಸರ್ಕಾರ ಇವರ ಟಿಪ್ಪಣಿಯನ್ನು ಉಲ್ಲೇಖಿಸಿ ಸರ್ಕಾರದ ಅಧೀನ ಕಾರ್ಯದರ್ಶಿಯವರು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು – ಇವರು ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ಕೇಂದ್ರವಾದ ಜ್ಞಾನಗಂಗೋತ್ರಿ ಆವರಣವನ್ನು 02 ವರ್ಷಗಳ ಕಾಲ ಆಡಳಿತಾತ್ಮಕ ಹಿತದೃಷ್ಟಿಯಿಂದ ಪ್ರವೇಶಾತಿ ಪ್ರಕ್ರಿಯೆ ಪ್ರಾರಂಭಿಸಲು ವೈದ್ಯಕೀಯ ಕಾಲೇಜಿಗೆ ವರ್ಗಾಯಿಸುವಂತೆ ಹಾಗೂ ಪ್ರಸ್ತುತ ವಿಶ್ವವಿದ್ಯಾನಿಲಯದ ಜ್ಞಾನಗಂಗೋತ್ರಿಯ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ, ಬೋಧಕ ಮತ್ತು ಬೋಧಕೇತರ ವರ್ಗಕ್ಕೆ ಕೊಠಡಿಗಳು, ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ವಸತಿ ನಿಲಯವನ್ನು ಪರ್ಯಾಯವಾಗಿ ಸರ್ಕಾರಿ ವಿಜ್ಞಾನ ಮತ್ತು ಸರ್ಕಾರಿ ಕಲಾ ಸ್ನಾತಕೋತ್ತರ ಕಾಲೇಜಿನಲ್ಲಿ ವ್ಯವಸ್ಥೆ ಕಲ್ಪಿಸಲು ಸಿ.ಡಿ.ಸಿ ಸಮಿತಿಯ ನಿರ್ಣಯ ಪಡೆಯಲು ಕ್ರಮಕೈಗೊಳ್ಳಲಾಗಿದೆ. ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ಕೇಂದ್ರವಾದ ಜ್ಞಾನಗಂಗೋತ್ರಿ ಆವರಣವನ್ನು ತಾತ್ಕಾಲಿಕವಾಗಿ ವರ್ಗಾಯಿಸಲು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ನಿರ್ಣಯಕೈಗೊಂಡು ವಿಶ್ವವಿದ್ಯಾನಿಲಯದ ಸ್ಪಷ್ಟ ಅಭಿಪ್ರಾಯವನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶನ ನೀಡಿರುತ್ತಾರೆ.

ತತ್ಸಂಬಂಧವಾಗಿ, ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ಕೇಂದ್ರವಾದ ಜ್ಞಾನಗಂಗೋತ್ರಿ ಚಿತ್ರದುರ್ಗ ಇಲ್ಲಿ ಸ್ನಾತಕೋತ್ತರ ವಿಭಾಗಗಳಿಗೆ ಅನುಕೂಲವಾಗುವಂತೆ ವಿಜ್ಞಾನ ಪ್ರಯೋಗಾಲಯ, ಗ್ರಂಥಾಲಯ ಮತ್ತು ತರಗತಿ ಕೊಠಡಿಗಳನ್ನು ಮತ್ತು ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಸಿದ್ಧಪಡಿಸಿಕೊಳ್ಳಲಾಗಿದೆ. ಅಲ್ಲದೆ, ಕಟ್ಟಡಗಳ ಪ್ರತಿಯೊಂದು ಕೊಠಡಿಗಳನ್ನು ಸ್ನಾತಕೋತ್ತರ ಪದವಿಗಳನ್ನು ನಡೆಸಲು ಅನುಕೂಲವಾಗುವಂತೆ ಮಾರ್ಪಾಡು ಮಾಡಿಕೊಳ್ಳಲಾಗಿದೆ. ಸದರಿ ಕ್ರಾಂಪಸ್‌ನಲ್ಲಿ ಎಂ.ಎ.,–ಕನ್ನಡ/ಅರ್ಥಶಾಸ್ತ್ರ/ಇಂಗ್ಲೀಷ್, ಮತ್ತು ಎಂ.ಎಸ್ಸಿ.,–ಭೌತಶಾಸ್ತ್ರ/ ರಸಾಯನಶಾಸ್ತ್ರ/ಸಸ್ಯಶಾಸ್ತ್ರ/ಪ್ರಾಣಿಶಾಸ್ತ್ರ, ಎಂ.ಕಾಂ., ಹಾಗೂ ಸಮಾಜಕಾರ್ಯ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ವಿದ್ಯಾರ್ಥಿಗಳು ಪ್ರವೇಶ ದಾಖಲಾತಿ ಪಡೆದು ವಿದ್ಯಾಭ್ಯಾಸ ನಡೆಸುತಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶಗಳಿಂದ ಬರುವ ಮಹಿಳಾ ಮತ್ತು ಪುರುಷ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯಗಳಲ್ಲಿ ಪ್ರಸ್ತುತವಾಗಿ ನೆಲೆಸಿರುತ್ತಾರೆ. ಈಗಾಗಲೇ ಪ್ರಥಮ ಮತ್ತು ದ್ವಿತೀಯ ವರ್ಷದ ಪರೀಕ್ಷೆಗಳನ್ನು ನಡೆಸಲು ನಿಯಮಾನುಸಾರ ವಿಶ್ವವಿದ್ಯಾನಿಲಯವು ಪೂರ್ವಸಿದ್ದತೆ ಮಾಡಿಕೊಳ್ಳಲಾಗುತ್ತಿದೆ. ಅದುದರಿಂದ, ಸದರಿ ಕ್ಯಾಂಪಸ್ ತಾತ್ಕಾಲಿಕವಾಗಿ 02 ವರ್ಷಗಳ ಕಾಲ ವೈದ್ಯಕೀಯ ಕಾಲೇಜಿಗೆ ವರ್ಗಾಯಿಸುವ ಕುರಿತು ಸರ್ಕಾರಕ್ಕೆ ವಿಶ್ವವಿದ್ಯಾನಿಲಯದ ಸ್ಪಷ್ಟ ಅಭಿಪ್ರಾಯವನ್ನು ಸಲ್ಲಿಸಬೇಕಾಗಿರುತ್ತದೆ.

ಸದರಿ ವಿಷಯವನ್ನು ದಿನಾಂಕ:24.02.2023ರ ಸಿಂಡಿಕೇಟ್ ವಿಶೇಷ ಸಭೆಗೆ ಮಂಡಿಸಲಾಗಿದೆ.

### ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದ ಚಿತ್ರದುರ್ಗ ತಾಲ್ಲೂಕು ಜಿ.ಆರ್. ಹಳ್ಳಿ ಗ್ರಾಮದ ಬಳಿ ಇರುವ ಸ್ನಾತಕೋತ್ತರ ಅಧ್ಯಯನ ಕೇಂದ್ರ ಜ್ಞಾನಗಂಗೋತ್ರಿ ಆವರಣದಲ್ಲಿ ಸುಮಾರು 350ಕ್ಕೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು ಹಾಗೂ ಚಿತ್ರದುರ್ಗ ಜಿಲ್ಲೆಯ ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶಗಳಿಂದ ಬಂದಿರುವ ಸುಮಾರು 70% ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಾಗಿರುತ್ತಾರೆ. ಆದ್ದರಿಂದ, ಸದರಿ ಆವರಣವನ್ನು ತಾತ್ಕಾಲಿಕವಾಗಿ ವೈದ್ಯಕೀಯ ಕಾಲೇಜಿಗೆ ವರ್ಗಾಹಿಸಲು ಸಭೆಯು ಸುಧೀರ್ಘ ಚರ್ಚೆಯ ನಂತರ ನಿರಾಕರಿಸಿತು. ಮುಂದುವರೆದು, ಯಾವುದೇ ಕಾರಣಕ್ಕೂ ಸ್ನಾತಕೋತ್ತರ ಕೇಂದ್ರವನ್ನು ವರ್ಗಾವಣೆ ಮಾಡಲಿಕ್ಕೆ ಸಾಧ್ಯವಿಲ್ಲದೇ ಇರುವುದರಿಂದ ಈ ಕುರಿತು ಸರ್ಕಾರಕ್ಕೆ ಪತ್ರಿಸಲು ಸಭೆಯು ನಿರ್ಣಯಿಸಿತು.

ಕುಲಸಚಿವರು ಕುಲಪತಿಗಳು

| ಹಣಕಾಸು ವಿಭಾಗ | |
| --- | --- |
| ವಿಷಯ ಸಂಖ್ಯೆ: | ವಿ.ಸಂ-09 (02/23) |

# -:ಟಿಪ್ಪಣಿ:-

**ವಿಷಯ:** ದಿನಾಂಕ:01.12.2022ರಂದು ನಡೆದ 2022-23ನೇ ಸಾಲಿನ ಹಣಕಾಸು ವರ್ಷದ ಎರಡನೇ ಹಣಕಾಸು ಸಮಿತಿ ಸಭೆಯ ನಡಾಳಿಗಳ ಅನುಮೋದನೆ ಕುರಿತು.

*****

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಭಾಂಗಣ, ಬೆಂಗಳೂರು – ಇಲ್ಲಿ ದಿನಾಂಕ:01.12.2022 ರಂದು ಜರುಗಿದ ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ಹಣಕಾಸು ವರ್ಷದ ಎರಡನೇ ಹಣಕಾಸು ಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ನಡಾವಳಿಗಳನ್ನು ದಿನಾಂಕ:24.02.2023ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗೆ, ಪರಿಶೀಲನೆಗೆ ಹಾಗೂ ಅಂಗೀಕಾರಕ್ಕಾಗಿ ಮಂಡಿಸಲಾಗಿದೆ.

## ನಿರ್ಣಯ

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರಿನಲ್ಲಿ ದಿನಾಂಕ:01.12.2022 ರಂದು ಜರುಗಿದ ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ಹಣಕಾಸು ವರ್ಷದ ಎರಡನೇ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಸುಧೀರ್ಘ ಚರ್ಚೆಯ ನಂತರ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಐ.ಕ್ಯೂ.ಎ.ಸಿ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ಸಂ–10 (02/23) |

## –:ಟಿಪ್ಪಣಿ:–

**ವಿಷಯ:** ವಿಶ್ವವಿದ್ಯಾನಿಲಯದ Annual Quality Assurance Report (AQAR) ವರದಿಯನ್ನು ನ್ಯಾಕ್‌ಗೆ ಸಲ್ಲಿಸುವ ಕುರಿತು.

*****

ವಿಶ್ವವಿದ್ಯಾನಿಲಯದ ನ್ಯಾಕ್ ವಾರ್ಷಿಕ ವರದಿ Annual Quality Assurance Report (AQAR) ನ್ನು ನ್ಯಾಕ್‌ಗೆ ಸಲ್ಲಿಸಲು ಕರಡು ವರದಿ ತಯಾರಾಗಿದ್ದು, ನ್ಯಾಕ್ ಕಛೇರಿಗೆ ಸಲ್ಲಿಸಲು ಸದರಿ ವಿಷಯವನ್ನು ದಿನಾಂಕ:24.02.2023ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗೆ, ಪರಿಶೀಲನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ Annual Quality Assurance Report (AQAR) ನ್ಯಾಕ್ ವಾರ್ಷಿಕ ವರದಿಯ ಕರಡು ವರದಿಯನ್ನು ಪರಿಶೀಲಿಸಿ ನ್ಯಾಕ್ ಕಛೇರಿಗೆ ಸಲ್ಲಿಸಲು ಸುಧೀರ್ಘ ಚರ್ಚೆಯ ನಂತರ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ಸಂ–11 (02/23) |

## –:ಟಿಪ್ಪಣಿ:–

**ವಿಷಯಃ** ವಿಶ್ವವಿದ್ಯಾನಿಲಯದ ಜ್ಞಾನಸೌಧ ಕಟ್ಟಡದಲ್ಲಿ ವೇದಿಕೆ ನಿರ್ಮಾಣ ಮಾಡಲಾಗಿರುವ ಕಾಮಗಾರಿಗೆ ಘಟನೋತ್ತರ ಅನುಮೋದನೆಗಾಗಿ ಮಂಡಿಸಿರುವ ಕುರಿತು.

*****

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದ ಜ್ಞಾನಸೌಧ ಕಟ್ಟಡದಲ್ಲಿ ವೇದಿಕೆ ನಿರ್ಮಾಣ ಕಾಮಗಾರಿಯನ್ನು ಸರ್ಕಾರಿ ಸಂಸ್ಥೆಯಾದ ನಿರ್ಮಿತಿ ಕೇಂದ್ರ, ದಾವಣಗೆರೆ – ಇವರಿಗೆ ವಹಿಸಲಾಗಿರುತ್ತದೆ. ಸದರಿ ವಿಷಯವನ್ನು ದಿನಾಂಕ:24.02.2023ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**ಅಂದಾಜು ವೆಚ್ಚದ ವಿವರ**

| SL No. | **Name of the work** | **Estimate Cost Rs. (in Lakhs)** |
|---|---|---|
| 01 | Construction of Stage at knowledge Plaza to Davanagere University at Tholahunase, Davanagere. (Tq & Dist) | 14.80 |

**ನಿರ್ಣಯ**

ವಿಶ್ವವಿದ್ಯಾನಿಲಯದ ಜ್ಞಾನಸೌಧ ಕಟ್ಟಡದಲ್ಲಿ ವೇದಿಕೆ ನಿರ್ಮಾಣ ಕಾಮಾಗಾರಿಯನ್ನು ಸರ್ಕಾರಿ ಸಂಸ್ಥೆಯಾದ ನಿರ್ಮಿತಿ ಕೇಂದ್ರ, ದಾವಣಗೆರೆ – ಇವರಿಗೆ ವಹಿಸಿರುವುದನ್ನು ಸಭೆಯು ಘಟನೋತ್ತರ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಐ.ಕ್ಯೂ.ಎ.ಸಿ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ಸಂ–12 (02/23) |

## –:ಟಿಪ್ಪಣಿ:–

**ವಿಷಯ:** ಸಿ.ಜಿ.ಪಿ.ಎ 10 ಪಾಯಿಂಟ್ ಸ್ಕೇಲ್ ಬದಲಿಗೆ 4 ಪಾಯಿಂಟ್ ಸ್ಕೇಲ್ ನಿಗದಿ ಬಗ್ಗೆ.

**ಉಲ್ಲೇಖ:** 1. ವಿದ್ಯಾರ್ಥಿ ಮನವಿ ಪತ್ರ ಸಂಖ್ಯೆ: ನಂ.ಇಲ್ಲ ದಿನಾಂಕ:22.02.2023

2. ಮಾನ್ಯ ಕುಲಪತಿಗಳ ಮೌಖಿಕ ಅನುಮೋದನೆ ದಿನಾಂಕ:23.02.2023

*****

**ಕುಮಾರಿ. ನವ್ಯಜನಕ ರಿ.ನಂ.ಸಿ63600019** ಎಂಬ ವಿದ್ಯಾರ್ಥಿನಿಯು 2019ರಲ್ಲಿ ಬಿ.ಕಾಂ ಪದವಿ ಪೂರ್ಣಗೊಳಿಸಿದ್ದು, ಈಗ ಹೊರ ದೇಶದಲ್ಲಿ ಸ್ನಾತಕೋತ್ತರ ಪದವಿಯನ್ನು ಮಾಡಲು ಇಚ್ಚಿಸಿ, ಪ್ರಸ್ತುತ ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ಸಿ.ಜಿ.ಪಿ.ಎ 10 ಪಾಯಿಂಟ್ ಸ್ಕೇಲ್ ಬದಲಿಗೆ 4 ಪಾಯಿಂಟ್ ಸ್ಕೇಲ್‌ಗೆ ಪರಿವರ್ತಿಸಿ ಕೊಡಬೇಕಾಗಿ ಮನವಿ ಸಲ್ಲಿಸಿರುತ್ತಾರೆ. ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ವಿಶ್ವವಿದ್ಯಾನಿಲಯವು ವಿಶೇಷ ಸಂದರ್ಭವೆಂದು ಪರಿಗಣಿಸಿ ಈ ವಿದ್ಯಾರ್ಥಿನಿಗೆ ಮಾತ್ರ ಬಿ.ಕಾಂ ಪದವಿಯ ಅಂಕಪಟ್ಟಿಗೆ ನಿಗದಿಪಡಿಸಿದ ಸಿ.ಜಿ.ಪಿ.ಎ 10 ಪಾಯಿಂಟ್ ಸ್ಕೇಲ್ ಬದಲಿಗೆ 4 ಪಾಯಿಂಟ್ ಸ್ಕೇಲ್‌ಗೆ ಪರಿವರ್ತಿಸಿ ಅಂಕಪಟ್ಟಿ ನೀಡಲು ದಿನಾಂಕ:24.02.2023ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### ನಿರ್ಣಯ

ಕುಮಾರಿ. ನವ್ಯಜನಕ ರಿ.ನಂ.ಸಿ63600019 ಎಂಬ ವಿದ್ಯಾರ್ಥಿನಿಗೆ ಮಾತ್ರ ಹೊರ ದೇಶದಲ್ಲಿ ಸ್ನಾತಕೋತ್ತರ ಪದವಿಯನ್ನು ಮಾಡಲು ಬಿ.ಕಾಂ ಪದವಿಯ ಅಂಕಪಟ್ಟಿಗೆ ನಿಗದಿಪಡಿಸಿದ ಸಿ.ಜಿ.ಪಿ.ಎ 10 ಪಾಯಿಂಟ್ ಸ್ಕೇಲ್ ಬದಲಿಗೆ 4 ಪಾಯಿಂಟ್ ಸ್ಕೇಲ್‌ಗೆ ಪರಿವರ್ತಿಸಿ ಅಂಕಪಟ್ಟಿ ನೀಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ವಿ.ಸಂ-13 (02/23) |

## -:ಟಿಪ್ಪಣಿ:-

**ವಿಷಯ:** ಪರೀಕ್ಷಾಂಗ ವಿಭಾಗಕ್ಕೆ ಸಂಬಂಧಿಸಿದ 03 ಆಧ್ಯಾದೇಶಗಳನ್ನು ಕೆಲವು ತಿದ್ದುಪಡಿಯೊಂದಿಗೆ ಸರ್ಕಾರಕ್ಕೆ ಸಲ್ಲಿಸುವ ಕುರಿತು.

*****

ಪರೀಕ್ಷಾಂಗ ವಿಭಾಗಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ 03 ಆಧ್ಯಾದೇಶಗಳನ್ನು ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಅದರೆ, ಸರ್ಕಾರವು ಸದರಿ ಆಧ್ಯಾದೇಶಗಳಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿ ಪುನಃ ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಲಾಗಿರುವ ಹಿನ್ನೆಲೆಯಲ್ಲಿ ಸದರಿ ಆಧ್ಯಾದೇಶಗಳನ್ನು ತಿದ್ದುಪಡಿ ಮಾಡಲಾಗಿದ್ದು, ಈಗ ಪುನಃ ಸರ್ಕಾರಕ್ಕೆ ಸಲ್ಲಿಸಲು ದಿನಾಂಕ:24.02.2023ರ ಸಿಂಡಿಕೇಟ್ ವಿಶೇಷ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

### ಅಧ್ಯಾಧೇಶಗಳ ವಿವರ

| ಕ್ರ.ಸಂ | ಆಧ್ಯಾಧೇಶಗಳು |
|---|---|
| 01 | ORDINANCES GOVERNING THE ACTS OF PUNISHMENT FOR BREACH OF DUTIES, MISBEHAVIOUR AND INDISCIPLINE BY PERSONS INVOLVED IN UNIVERSITY EXAMINATION WORK |
| 02 | ORDINANCES GOVERNING THE ACTS OF INDISCIPLINE AND MALPRACTICE IN DAVANGERE UNIVERSITY EXAMINATIONS |
| 03 | ORDINANCES GOVERNING THE PROCEDURE FOR REVALUATION/ CHALLENGE VALUATION OF ANSWER BOOKS OF THE UNIVERSITY EXAMINATIONS |

### ನಿರ್ಣಯ

ಪರೀಕ್ಷಾಂಗ ವಿಭಾಗಕ್ಕೆ ಸಂಬಂಧಿಸಿದ ಮೇಲ್ಕಂಡ 03 ಆಧ್ಯಾದೇಶಗಳನ್ನು ಕೆಲವು ತಿದ್ದುಪಡಿಯೊಂದಿಗೆ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
| --- | --- |
| ವಿಷಯ ಸಂಖ್ಯೆ: | ವಿ.ಸಂ-14 (02/23) |

# -:ಟಿಪ್ಪಣಿ:-

ವಿಷಯ: ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸ್ನಾತಕ ಪದವಿ ಕಾಲೇಜುಗಳಿಗೆ 2022-23ನೇ ಸಾಲಿನಿಂದ ಶಾಶ್ವತ ಸಂಯೋಜನೆ ನವೀಕರಣ ಮಂಜೂರು ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಸೂತ್ತೋಲೆ ಸಂಖ್ಯೆ: ಇಡಿ 24 ಯುಡಿವಿ 2016, ದಿನಾಂಕ:29.08.2016.
2. ಸರ್ಕಾರದ ಸೂತ್ತೋಲೆ ಸಂಖ್ಯೆ: ಇಡಿ 227 ಯುಆರ್‌ಸಿ 2017,ದಿನಾಂಕ:07.07.2017.
3. ಸರ್ಕಾರದ ಸೂತ್ತೋಲೆ ಸಂಖ್ಯೆ: ಇಡಿ 119 ಯುಆರ್‌ಸಿ 2021, ದಿನಾಂಕ:23.07.2021.
4. ಸರ್ಕಾರದ ಪತ್ರ ಸಂಖ್ಯೆ: ಇಡಿ 161 ಯುಆರ್‌ಸಿ 2022, ದಿನಾಂಕ:11.07.2022.
5. ಸಿಂಡಿಕೇಟ್ ಸಭೆಯ ನಿರ್ಣಯ ದಿನಾಂಕ:25.01.2023.
6. ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ದಿನಾಂಕ:25.01.2023.

ಉಲ್ಲೇಖ(1) ಮತ್ತು (2)ರ ಸರ್ಕಾರದ ಪತ್ರದನುಸಾರ, ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸ್ನಾತಕ ಪದವಿ ಕಾಲೇಜುಗಳಿಗೆ 2022-23ನೇ ಸಾಲಿನಲ್ಲಿ ಶಾಶ್ವತ ಸಂಯೋಜನೆ ನವೀಕರಣ ಮಂಜೂರು ಮಾಡುವ ಕುರಿತು ಕ್ರಮಕೈಗೊಳ್ಳಲಾಗಿ, ಹಲವಾರು ಕಾಲೇಜಿನವರು ನ್ಯಾಕ್ ಮರು ಮಾನ್ಯತೆ ಹೊಂದಿರದೆ ಇರುವುದರಿಂದ ಅಂತಹ ಕಾಲೇಜುಗಳಿಗೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಯುಎನ್‌ಇ 2021, ದಿನಾಂಕ:12.02.2021ರ ಮಾರ್ಗಸೂಚಿಗಳನ್ವಯ, ಆನ್‌ಲೈನ್ ಸಂಯೋಜನಾ ನಿಗಧಿತ ಅಂಕಗಳು ಬರದೇ ಇರುವ ಕಾಲೇಜುಗಳಿಗೆ ಹಾಗೂ ನ್ಯಾಕ್ ಮರು ಮಾನ್ಯತೆ ಹೊಂದದೇ ಇರುವ ಕಾಲೇಜುಗಳಿಗೆ ತಾತ್ಕಾಲಿಕವಾಗಿ ಮುಂದುವರಿಕೆ ಸಂಯೋಜನಾ ಜ್ಞಾಪನ ಪತ್ರವನ್ನು ನೀಡಲಾಗಿತ್ತು.

ಆದರೆ, ಕೆಲವು ಕಾಲೇಜುಗಳ ಪ್ರಾಂಶುಪಾಲರುಗಳು 2022-23ನೇ ಶೈಕ್ಷಣಿಕ ಸಾಲಿನಿಂದ ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ ಉಲ್ಲೇಖ(3)ರ ಸರ್ಕಾರದ ಸುತ್ತೋಲೆಯ ಪ್ರಕಾರ, ಶಾಶ್ವತ ಸಂಯೋಜನೆ ನೀಡುವಂತೆ ಕೋರಿ ವಿಶ್ವವಿದ್ಯಾನಿಲಯಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ.

ಈ ಸಂಬಂಧವಾಗಿ, ಈಗಾಗಲೇ ದಿನಾಂಕ:25.01.2023ರಂದು ಜರುಗಿದ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ ಸಭೆಗಳಲ್ಲಿ 2022-23ನೇ ಶೈಕ್ಷಣಿಕ ಸಾಲಿನಿಂದ ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ ಉಲ್ಲೇಖ(3)ರ ಸರ್ಕಾರದ ಸುತ್ತೋಲೆಯ ಪ್ರಕಾರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಅನುಮೋದನೆ ಪಡೆಯಲಾಗಿತ್ತು.

ಉಲ್ಲೇಖಿತ(4)ರ ಸರ್ಕಾರದ ಪತ್ರದಲ್ಲಿ, 2022-23ನೇ ಸಾಲಿಗೆ ಯಾವುದೇ ಸಂಯೋಜನಾ ಮುಂದುವರಿಕೆ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಕಳುಹಿಸುವುದರಿಂದ, ಅನಾವಶ್ಯಕ ವಿಳಂಬಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಅದುದರಿಂದ, ಅಂತಹ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸುವ ಪೂರ್ವದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣಗಳನ್ವಯ, ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು, ನಿಯಮಾನುಸಾರ ವಿಶ್ವವಿದ್ಯಾನಿಲಯದ ಹಂತದಲ್ಲಿ ಅಗತ್ಯ ಕ್ರಮಕೈಗೊಳ್ಳುವಂತೆ ನಿರ್ದೇಶನ ನೀಡಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:24.02.2023ರ ಸಿಂಡಿಕೇಟ್ ವಿಶೇಷ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸ್ನಾತಕ ಪದವಿ ಕಾಲೇಜುಗಳಿಗೆ 2022-23ನೇ ಸಾಲಿಗೆ ಯಾವುದೇ ಸಂಯೋಜನಾ ಮುಂದುವರಿಕೆ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಕಳುಹಿಸುವುದರಿಂದ, ಅನಾವಶ್ಯಕ ವಿಳಂಬಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಅದುದರಿಂದ, ಅಂತಹ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸುವ ಪೂರ್ವದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣಗಳನ್ವಯ, ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು, ನಿಯಮಾನುಸಾರ ವಿಶ್ವವಿದ್ಯಾನಿಲಯದ ಹಂತದಲ್ಲಿ ಅಗತ್ಯ ಕ್ರಮಕೈಗೊಳ್ಳುವಂತೆ ಸರ್ಕಾರವು ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ ನಿಯಮಾನುಸಾರ ವಿಶ್ವವಿದ್ಯಾನಿಲಯದ ಹಂತದಲ್ಲಿ ಅಗತ್ಯ ಕ್ರಮಕೈಗೊಳ್ಳುವಂತೆ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಸಭೆಯು ಅಧಿಕಾರ ನೀಡಿತು.

ಕುಲಸಚಿವರು | ಕುಲಪತಿಗಳು

ಕೊನೆಯಲ್ಲಿ ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.